Like that there are some other improvements recommended. In respect of the jurisdiction, they have recommended some changes being made. Subsequently, the opinion of some of the members of the K.G.F. Sanitary Board area seems to be in favour of converting it into a municipality rather than having it as a Board.

Sri H. C. LINGA REDDY.—Shall I take it that you are thinking of implementing the proposals to convert the area into a Municipality ?

The Hon'ble Sri R. CHENNIGA-RAMIAH.— This question has been answered.

Sri H. C. LINGA REDDY.—For how long has the question been under the consideration of the Government ?

The Hon'ble Sri R. CHENNIGA-RAMIAH.—Since recently, the question of converting that area into a Municipality is under consideration.

Sri H. C. LINGA REDDY.—Do the Government take early decision whether it should be a Municipality or a Corporation ?

The Hon'ble Sri R. CHENNIGA-RAMIAH.—Certainly.

Sri H. M. CHANNABASAPPA (Mysore District—General).—What is the object of appointing this Committee?

The Hon'ble Sri R. CHENNIGA-RAMIAH.—The object was to improve the condition in the Sanitary Board area. The Committee has made some recommendations in that regard ; but subsequently some changes are considered to be desirable and so the question is under consideration.

Sri H. M. CHANNABASAPPA.—Do the Government consider the report to be confidential ?

The Hon'ble Sri R. CHENNIGA-RAMIAH.—I have already answered that it is not a confidential one. But, it may not serve any purpose at present to publish it because the subsequent idea is altogether different.

Sri H. M. CHANNABASAPPA.—What is the difficulty that the Government are experiencing in converting this area into a Municipality ?

The Hon'ble Sri R. CHENNIGA-RAMIAH.—There are some technical difficulties. I could not tell the Hon'ble Member at this stage. Under the Constitution Act this is considered to be a mining area. So, that question is under consideration. It is still being examined and I think very soon we will be in a position to finalise it.

Sri M. MUNISWAMY (Kolar District—Depressed Class).—I would like to know whether there is any proposal by the Committee to covert the K. G. F. Sanitary Board area into a Municipality ?

The Hon'ble Sri R. CHENNIGA-RAMIAH.—I have replied that this question is under the serious consideration of the Government.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ)—ಚಿನ್ನದ ಗಣಿ ಪ್ರದೇಶ ಮೈನಿಂಗ್ ಪ್ರದೇಶವೆಂದು ಹೇಳಿ ಕೆಲವು complication ಗಳುಂಟಾಗಿವೆಯೆಂದು ಹೇಳಿದರಿ. Mining area ಎಂದರೆ, ಗಣಿ ಯಿರುವ ಪ್ರದೇಶ ಮಾತ್ರ ಸೇರುತ್ತದೆಯೋ ಅಥವಾ ಟೌನ್ ಪ್ರದೇಶವೂ ಸೇರುತ್ತದೆಯೋ ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—ಅಲ್ಲಿ ಹತ್ತಿರದಲ್ಲಿಯೇ mining area ಇರುವುದರಿಂದ ಭಾರತದ ಶಾಸನದ ಪ್ರಕಾರ ಅದು ಗಣಿಯಿರುವ ಪ್ರದೇಶಕ್ಕೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಸಮೀಪದ ಟೌನಿಗೂ ಅನ್ವಯಿಸುತ್ತದೆಯೋ ಎಂಬುದನ್ನು ನಮ್ಮ 'ಲಾ' ಇಲಾಖೆಯವರು ಪರಿಶೀಲನೆಮಾಡುತ್ತಿದ್ದಾರೆ. ಸಾಧ್ಯವಿದ್ದರೆ ಯಾವ ಭಾಗವನ್ನು ತಪ್ಪಿಸಿ ಮಿಕ್ಕ ಭಾಗವನ್ನು ಹಿಂದು ಮುನಿಸಿಪಾಲಿಟಿಯಾಗಿ ಏರ್ಪಡಿಸಬಹುದೆಂಬುದನ್ನೂ ಅವರು ಯೋಚನೆಮಾಡುತ್ತಿದ್ದಾರೆ.

Mr. SPEAKER.—Next question No. 140. Sri M. C. Venkateshan. The Hon'ble Member is not present. The question will be treated as unstarred.

The next question, No. 141, by the same Hon'ble Member will also be treated as unstarred. Next question Sri V. S. Narayana Rao.

Laxmipuram Sanitary Board.

*Q.—150 **Sri V. S. NARAYANA RAO** (Bangalore City—General).—Will the Government be pleased to state :—

(a) whether they have not received representations against the constitution of the Laxmipuram Sanitary Board ;

(b) whether they consider the desirability of merging this Sanitary Board with the Arsikere Town Municipality ?

A.—**The Hon'ble Sri R. CHENNIGA-RAMIAH** (Minister for Local Self-Government).—(a) Yes.

(b) No such proposal is under consideration.

ಶ್ರೀ ವಿ. ಎಸ್. ನಾರಾಯಣರಾಯರು.—(a) ಪ್ರಶ್ನೆಗೆ ಉತ್ತರವಾಗಿ 'yes' ಎಂದು ಹೇಳಿದ್ದೀರಿ. ಯಾರಿಂದ ಹಾಗೆ ವಿರುದ್ಧವಾಗಿ ಮನವಿಗಳು ಬಂದಿವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುನಿಸಿಪಾಲಿಟಿಯ ಕೆಲವು ಸದಸ್ಯರುಗಳೂ ಮತ್ತು ಕೆಲವು ಪುರಜನರೂ ಹಾಗೆ ಕೇಳಿಕೊಂಡಿದ್ದಾರೆ.

ಶ್ರೀ ವಿ. ಎಸ್. ನಾರಾಯಣರಾಯರು.—ಈ ಸ್ಯಾನಿಟೆರಿ ಬೋರ್ಡು ಸ್ಥಾಪನೆಯಾದುದು ಯಾವಾಗ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೋದ ವರ್ಷ ತಾನೆ ಆಗಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಹಾಗೆ ಅದನ್ನು ಏರ್ಪಡಿಸುವುದಕ್ಕೆ ಮುಖ್ಯ ಕಾರಣ ಏನು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮುಂಚೆ ಈ ಎಕ್ಸೆಪ್ಷನ್ ವೆಂಕಟಸ್ವಾಮಿಯವರಿಗೆ ಸೇರಿದ್ದು. ಅವರು ಅದನ್ನು ಮುನಿಸಿಪಾಲಿಟಿ ಆಡಳಿತಕ್ಕೆ ಸೇರಿಸಿಕೊಳ್ಳಿ ಎಂದು ಪದೇ ಪದೇ ಕೇಳಿಕೊಂಡರು. ಆ ಎಕ್ಸೆಪ್ಷನ್‌ನಲ್ಲಿ ಸ್ಯಾನಿಟೇಷನ್ ಡೆವಲಪ್‌ಮೆಂಟ್ ಮುಂತಾದುವುಗಳನ್ನು ನೋಡಿಕೊಳ್ಳುವುದಕ್ಕೆ ಯಾವುದಾದರೂ ಒಂದು ಏಜೆನ್ಸಿ ಅವಶ್ಯಕವಾಗಿ ಬೇಕಾಗಿತ್ತು. ಅದಕ್ಕಾಗಿ ಅವರು ಮುನಿಸಿಪಾಲಿಟಿಯವರನ್ನು ಎಷ್ಟು ಕೇಳಿಕೊಂಡರೂ ಅವರು ಒಪ್ಪಲಿಲ್ಲ. ಕೊನೆಗೆ ಅವರು ಸರ್ಕಾರದವರಿಗೆ ಬರೆದುಕೊಂಡರು. ಸರ್ಕಾರದವರು ಮುನಿಸಿಪಾಲಿಟಿಯವರನ್ನು ಅವರ ಅಭಿಪ್ರಾಯ ಕೇಳಿ ಅವರೇ ಬೇರೆ ಏರ್ಪಾಡು ಮಾಡಿಕೊಳ್ಳಿ ಎಂದು ಹೇಳಿದ್ದರ ಮೇಲೆ ಹೀಗೆ ಮಾಡಿದ್ದಾರೆ.

ಶ್ರೀ ವಿ. ಎಸ್. ನಾರಾಯಣರಾಯರು.—ಹೀಗೆ ಯಾರಾದರೂ ಎಕ್ಸೆಪ್ಷನ್ ಮಾಡಿ ಅದನ್ನು ನೋಡಿಕೊಳ್ಳುವುದಕ್ಕೆ ತಮಗೇ ಒಂದು ಸ್ಯಾನಿಟೆರಿ ಬೋರ್ಡ್ ಮಾಡಿಕೊಡಬೇಕೆಂದು ಕೇಳಿಕೊಂಡರೆ ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಪ್ರದೇಶವನ್ನು ಯಾರಾದರೂ ಒಬ್ಬರು ನೋಡಿಕೊಳ್ಳಬೇಕು. ಮುನಿಸಿಪಾಲಿಟಿಯವರು ನೋಡಿಕೊಳ್ಳಬೇಕು, ಇಲ್ಲವೇ ಸರ್ಕಾರದವರು ನೋಡಿಕೊಳ್ಳಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಗ್ರಾಮ ಪಂಚಾಯ್ತಿಗೆ ಸೇರಿಸಬಹುದಾಗಿತ್ತಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅಲ್ಲಿ ಯಾವ ಪಂಚಾಯ್ತಿಯೂ ಹತ್ತಿರದಲ್ಲಿಲ್ಲ. ಟೌನ್ ಮುನಿಸಿಪಾಲಿಟಿ ಮಾತ್ರ ಇದೆ.

Sri H. SIDDANANJAPPA (Hassan District—General).—Has this arrangement given room for a number of disputes now and then between the Town Municipality and the Sanitary Board?

The Hon'ble Sri R. CHENNIGA-RAMIAH.—I have not come across any such disputes, Sir.

Sri B. N. BORANNA GOWDA (Hassan District-General).—Has it come to the notice of the Government that the Municipality and the Sanitary Board have come to an agreement to have a common municipality?

The Hon'ble Sri R. CHENNIGA-RAMIAH.—I have no such information, Sir.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈಗ ಆ ಮುನಿಸಿಪಾಲಿಟಿಯವರು ಎರಡನ್ನೂ ಸೇರಿಸಿ ಒಂದೇ ಮುನಿಸಿಪಾಲಿಟಿ ಮಾಡೋಣವೆಂದು ಹೇಳಿದರೆ ಅದರಂತೆ ಮಾಡುತ್ತೀರಾ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಊಹೆಯ ಪ್ರಶ್ನೆಯಾಯಿತು.

ಶ್ರೀ ಬಿ. ಹುಚ್ಚೇಗೌಡರು.—ಸ್ಯಾನಿಟೆರಿ ಬೋರ್ಡನ್ನೂ ತಮ್ಮ ಮುನಿಸಿಪಾಲಿಟಿಗೇ ಸೇರಿಸಬೇಕೆಂದು ಅವರಿಂದ ಸಲಹೆ ಬಂದಿಲ್ಲವೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಚೆಗೇನೋ ಮುನಿಸಿಪಾಲಿಟಿಯವರು ಆ ರೀತಿ ನಿರ್ಣಯಮಾಡಿ ಕಳುಹಿಸಿದ್ದಾರೆ. ಆದರೆ ಹೀಗೆ ವರ್ಷಕ್ಕೊಂದು ಸಾರಿ ಮುನಿಸಿಪಾಲಿಟಿ ಮಾಡುವುದು, ಆ ಮೇಲೆ ಮತ್ತೆ ಸ್ಯಾನಿಟೆರಿ ಬೋರ್ಡ್ ಮಾಡುವುದು ಸರಿಯಾದ ರೀತಿ ನೀತಿಯಲ್ಲ. ಮೊದಲು ನಾವು ಮುನಿಸಿಪಾಲಿಟಿಯವರನ್ನು ಕೇಳಿದಾಗ, ಮುನಿಸಿಪಾಲಿಟಿಯ ಕೆಲವು ಪ್ರದೇಶವನ್ನೇ ಸ್ಯಾನಿಟೆರಿ ಬೋರ್ಡಿಗೆ ಸೇರಿಸಿಕೊಳ್ಳಿ ಎಂದು ಹೇಳಿದ್ದರು. ಆದ್ದರಿಂದ ಈಗತಾನೆ ಒಂದು ವರ್ಷದಲ್ಲಿ ಇಷ್ಟೆಲ್ಲಾ formalities ನಡೆಸಿ ಈಗ ಮತ್ತೆ ಬದಲಾವಣೆ ಮಾಡುವುದಕ್ಕೆ ಹೊರಡುವುದು ಸರಿಯಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಇದರ ತೊಂದರೆಯೆಲ್ಲಾ ನುಂಕ ಸಾರಿಗೆಗಳನ್ನು ಕೊಡುವುದರಲ್ಲಿ ಹೆಚ್ಚು ಹೆಚ್ಚಿಗೂ ನುಂಕ ಕೊಡಬೇಕಾಗುತ್ತದೆ. ಮುನಿಸಿಪಾಲಿಟಿಗೆ ಒಂದು ಸಾರಿ ನುಂಕ, ಸ್ಯಾನಿಟೆರಿ ಬೋರ್ಡಿಗೆ ಹೋದರೆ ಒಂದು ಸಾರಿ ನುಂಕ—ಹೀಗೆಲ್ಲಾ ಜನರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಈಗ ಮುನಿಸಿಪಾಲಿಟಿಯಿಂದ ಬಂದಿರುವ ಸಲಹೆಯ ಪ್ರಕಾರ ಏಕೆ ಮಾಡಕೂಡದು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ಸ್ಯಾನಿಟೆರಿ ಬೋರ್ಡನ್ನು ಮೊದಲು ಸ್ಥಾಪನೆ ಮಾಡಿದಾಗ ಅದಕ್ಕೆ ತಕ್ಕಂತೆ ಬೇಕಾದ ನಿಯಮ ನಿಬಂಧನೆಗಳ ಏರ್ಪಾಡುಮಾಡಿದ್ದಾಗಿದೆ. ಆ ಸಂದರ್ಭದಲ್ಲಿ ಮುನಿಸಿಪಾಲಿಟಿಗೂ ಸ್ಯಾನಿಟೆರಿ ಬೋರ್ಡಿಗೂ ಯಾವ ವಿಧದಲ್ಲೂ ತಿಕ್ಕಾಟ ಬರದಹಾಗೆ ಏರ್ಪಡಿಸಿದ್ದೇವೆ. ಆ ಪ್ರಕಾರ ಜಗಳ ಬಂದಿರುವುದು ಯಾವುದೂ ನಮ್ಮ ಗಮನಕ್ಕೆ ಬಂದಿಲ್ಲ. ಸರ್ಕಾರದವರು ಮುನಿಸಿಪಾಲಿಟಿಯವರ ಹಿತರಕ್ಷಣೆ ಮಾಡುವುದಕ್ಕೂ ಸ್ಯಾನಿಟೆರಿ ಬೋರ್ಡಿನ ಹಿತರಕ್ಷಣೆ ಮಾಡುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿರುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು.—ಹಿಂದೆ ಮುನಿಸಿಪಾಲಿಟಿಯವರು ಒಪ್ಪದೆ ಇರುವುದು, ನೀವು ಅವರಿಗೆ ಒಪ್ಪುವುದಕ್ಕಾಗದಂಥ ಷರತ್ತುಗಳನ್ನು ಹಾಕಿದ್ದರಿಂದ ಅಲ್ಲವೇ? ಸೈಟುಗಳ ವಿಲೇವಾರಿ, ಮೇಲ್ವಿಚಾರಣೆ ಮುಂತಾದ ವಿಷಯದಲ್ಲಿ ಅವರಿಗೆ ಅವಕಾಶ ಕೊಡಬೇಕೆಂದು ಕೇಳಿದ್ದರಿಂದ ಅಲ್ಲವೇ ಮುನಿಸಿಪಾಲಿಟಿಯವರು ಒಪ್ಪದೆ ಇದ್ದುದು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗೇನೂ ಇಲ್ಲ. ಲಕ್ಷ್ಮೀಪುರಂ ಪ್ರದೇಶವನ್ನು ಮುನಿಸಿಪಾಲಿಟಿಗೆ ಸೇರಿಸಿಕೊಳ್ಳಿ ಎಂದು ಮಾತ್ರ ಕೇಳಿಕೊಂಡಿದ್ದರು.

ಶ್ರೀ ಬಿ. ಹುಚ್ಚೇಗೌಡರು.—ಹೇಗಾದರೂ ಆಗಲಿ ಒಂದೇ ಮುನಿಸಿಪಾಲಿಟಿ ಮಾಡುವುದರಿಂದ ಎಲ್ಲರಿಗೂ ಅನುಕೂಲವಾಗುತ್ತಿದೆಯಲ್ಲವೇ ?

ಮಾನ್ಯ ಶ್ರೀ ಆರ್ ಚೆನ್ನಿಗರಾಮಯ್ಯನವರು.—ಅದು ಅಭಿಪ್ರಾಯದ ವಿಷಯ.

Improvement of Water Supply to Shimoga Town.

*Q.—180. **Sri Kadidal MANJAPPA** (Shimoga District-General).—Will the Government be pleased to state :—

(a) whether they have accorded sanction to the scheme of improving the water supply to Shimoga Town ;

(b) the date on which the sanction was accorded ;

(c) the steps they have taken to implement the scheme ?

A.—**The Hon'ble Sri R. CHENNIGARAMIAH** (Minister for Local Self-Government).—(a) and (b) It has been decided to sanction an estimate for Rs. 8,19,060.

(c) A suitable grant will be sanctioned to the Municipality early next financial year.

ಶ್ರೀ ಕಡಿದಾಳ್ ಮಂಜಪ್ಪನವರು.— ಈ ಪ್ರಶ್ನೆ ಎಷ್ಟು ದಿವಸದಿಂದ ಸರ್ಕಾರದವರ ಪರಿಶೀಲನೆಯಲ್ಲಿದೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—1949ನೆಯ ಇಸವಿಯಿಂದ.

ಶ್ರೀ ಕಡಿದಾಳ್ ಮಂಜಪ್ಪನವರು.—ಕಳೆದ ವರ್ಷ ಮಾನ್ಯ ಸಚಿವರು ಶಿವಮೊಗ್ಗಾಕ್ಕೆ ಬಂದಾಗ ಇದನ್ನು ಮಂಜೂರುಮಾಡಿಬಿಟ್ಟಿದ್ದೇವೆಂದು ಹೇಳಿದ್ದು ಜ್ಞಾಪಕದಲ್ಲಿದೆಯೇ ? ಅದು ಮಂಜೂರಾಗಿದೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಮಂಜೂರಾಗಿದೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಹಣ ಯಾವಾಗ ಒದಗಿಸುತ್ತೀರಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು — ಹಣ ಒದಗಿಸಿದೆ. ಆದರೆ ಆ ಮುನಿಸಿಪಾಲಿಟಿಯವರು ಕೊಡಬೇಕಾದ ತವ ಭಾಗವನ್ನು ಸರ್ಕಾರದಿಂದ ಸಾಲ ತೆಗೆದುಕೊಂಡು ಕೊಡಬೇಕಾಗಿದೆ. ಸರ್ಕಾರದವರು ಆ ಸಾಲವನ್ನೂ ಕೊಡಬೇಕಾಗಿದೆಯಲ್ಲದೆ ಸರ್ಕಾರಿ ಗ್ಯಾರಂಟಿನ್ನೂ ಕೊಡಬೇಕು. ಹೀಗೆ ಮುನಿಸಿಪಾಲಿಟಿಯವರ ಭಾಗದ ಹಣವನ್ನು ಸರ್ಕಾರದವರು ಕೊಡಬೇಕಾಗಿ ಬಂದು ಒಟ್ಟು ಅಂದಾಜು ಮೊಬಲಗನ್ನೂ ಒಂದೇ ಸಾರಿ ಡಿಪಾಜಿಟ್ ಮಾಡಬೇಕಾದ ಸಮಸ್ಯೆಯನ್ನು ಸಂಬಂಧಪಟ್ಟ ಇಲಾಖೆಯವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು (ಬೆಂಗಳೂರು ಜಿಲ್ಲೆ).—ಮುನಿಸಿಪಾಲಿಟಿಗೆ ಹೀಗೆ ಸಾಲ ಕೊಡುವ ವಿಷಯಕ್ಕೂ ತಾವು ಬಡ್ಡಿ ಹಾಕುತ್ತೀರಾ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಾಗಿದ್ದು.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ಎಷ್ಟು ದರ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಸೇಕಡ 5 ರಂತೆ.

ಶ್ರೀ ಡಬ್ಲ್ಯು. ಎಚ್. ಹನುಮಂತಪ್ಪನವರು.—ನಾಲ್ಕು ರೂಪಾಯಿನಂತೆ ಬೇರೆ ಕಡೆ ಕೊಟ್ಟಿಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಹಿಂದಿನ ಕಾಲದಲ್ಲಿ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಮುಂದಿನ ಸಾಲಿನಲ್ಲಿ ಕೈಕೊಳ್ಳುತ್ತೀರೆಂದರೆ ಯಾವ ಸಾಲಿನಲ್ಲಿ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇದೇ ಮಾರ್ಚಿ ತಿಂಗಳು ಆಖೈರಾದ ಮೇಲೆ ಮುಂದಿನ ಸಾಲು ಪ್ರಾರಂಭವಾಗುತ್ತೆ.

ಶ್ರೀ ಎಸ್. ಕರಿಯಪ್ಪನವರು.— ಈ ಸಲದ ಬಜೆಟ್ಟಿನಲ್ಲಿ ಅದನ್ನು ಸೇರಿಸಿದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹಿಂದೆಯೇ ಸೇರಿಸಿದೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ–ಜನರಲ್).—ಸೇಕಡ 5ರಂತೆ ಬಡ್ಡಿ ಹಾಕುವುದು ಬಹಳ ಜಾಸ್ತಿಯಲ್ಲವೇ? ಅದನ್ನು ಕಡಿಮೆಮಾಡುವುದಕ್ಕಾಗುತ್ತದೆಯೇ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆಗುವುದಿಲ್ಲ.

Formation of Industrial Board at Harihar.

*Q.—**209**. **Sri G. VEERAPPA** (Chitaldrug District—General).—

Will the Government be pleased to state :—

(*a*) whether they intend constituting an Industrial Town Board at Harihar; if so, its constitution and scope of work and the object ;

(*b*) the opinion of the Harihar Town Municipal Council in this respect;

(*c*) the number of industrial concerns that come under the Town Board as at present ?

A.—**The Hon'ble Sri R. CHENNIGARAMIAH** (Minister for Local Self-Government).—

(*a*) Government in their Order No. L. 1589-906—Ml. 161-47-2, dated 16th April 1948, have passed orders regarding the formation of an Industrial Town Board for Harihar in Chitaldrug District.